ದಿನಾಂಕಃ29/07/2026

**<u>ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತುಃ -</u>**

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಓ ಸಿ ಎನ್ ವಕೀಲರಿಂದಃ-</u>**

4. ನಲ್ಲಪ್ಪಗಳ ತಿಪ್ಪೇಸ್ವಾಮಿ ನನಗೆ ಗೊತ್ತು. ನಲ್ಲಪ್ಪಗಳ ತಿಪ್ಪೇಸ್ವಾಮಿ ರವರು ಈಗ ತೀರಿಕೊಂಡಿದ್ದಾರೆ. ನಲ್ಲಪ್ಪಗಳ ತಿಪ್ಪೇಸ್ವಾಮಿ ರವರು ಜೀವಂತವಿದ್ದಾಗ ನನ್ನ ತಂದೆಯ ವಿರುದ್ಧ ಓ ಎಸ್ ನಂಃ110/2000 ನ್ನು 2ನೇ ಅಪರ ಸಿವಿಲ್ ನ್ಯಾಯಾಲಯ ಚಿತ್ರದುರ್ಗದಲ್ಲಿ ಹೂಡಿದ್ದರು ಎಂದರೆ ಸರಿ. ಆ ದಾವೆಯನ್ನು ಯಾವ ವಿಚಾರಕ್ಕಾಗಿ ಹೂಡಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ತೀರಿಕೊಂಡ ನಂತರ ಆ ದಾವೆಯಲ್ಲಿ ನಾನು ಪಾರ್ಟಿ ಯಾಗಿ ಬಂದಿಲ್ಲ.

5. ಶಾಂತಮ್ಮ ನನ್ನ ತಾಯಿ ಎಂದರೆ ಸರಿ. ಓ ಎಸ್ ನಂಃ110/2000 ರ 2 ನೇ ಪ್ರತಿವಾದಿ ಹನುಮಣ್ಣ ನನ್ನ ತಂದೆ ಎಂದರೆ ಸರಿ. ಓ ಎಸ್ ನಂಃ110/2000 ರಲ್ಲಿ ಇರುವ ಪ್ರತಿವಾದಿ ನಾಗರಾಜ್ ರವರು ನನ್ನ ಅಣ್ಣ ಎಂದರೆ ಸರಿ. ಸದರಿ ನಾಗರಾಜ್ ರವರು ಈಗ ಮೃತಪಟ್ಟಿದ್ದಾರೆ. ಓ ಎಸ್ ನಂಃ110/2000 ರಲ್ಲಿ ಇರುವ ಪ್ರತಿವಾದಿ ತಿಪ್ಪೇಸ್ವಾಮಿ ಎಸ್ ಹೆಚ್ ನಾನೇ ಎಂದರೆ ಸರಿ. ಓ ಎಸ್ ನಂಃ110/2000 ರಲ್ಲಿ ಇರುವ ಪ್ರತಿವಾದಿ ಮಂಜಣ್ಣ ನನ್ನ ತಮ್ಮ ಎಂದರೆ ಸರಿ. ಓ ಎಸ್ ನಂಃ110/2000 ರಲ್ಲಿ ಇರುವ ಪ್ರತಿವಾದಿ ಭಾಗ್ಯಮ್ಮ ನನ್ನ ತಂಗಿ ಎಂದರೆ ಸರಿ. ಭಾಗ್ಯಮ್ಮ ರವರು ಈಗ ತೀರಿಕೊಂಡಿದ್ದಾರೆ. ಓ ಎಸ್ ನಂಃ110/2000 ರಲ್ಲಿ ನನ್ನ ತಂದೆ ಮೃತಪಟ್ಟ ನಂತರ ನನ್ನ ತಾಯಿ ಶಾಂತಮ್ಮ, ನನ್ನ ಅಣ್ಣ ಹನುಮಣ್ಣ, ನಾನು, ನನ್ನ ತಮ್ಮ ಮಂಜಣ್ಣ ಮತ್ತು ನನ್ನ ತಂಗಿ ಭಾಗ್ಯಮ್ಮ ರವರು ವಾರಸುದಾರರಾಗಿ ಬಂದಿದ್ದೇವು ಎಂದರೆ ಸರಿ.

6. ನನ್ನ ತಂಗಿ ಭಾಗ್ಯಮ್ಮ ರವರಿಗೆ ಮೊಳಕಾಲ್ಮೂರು ತಾಲ್ಲೂಕಿನ ವೆಂಕಟಪುರ ಗ್ರಾಮಸ್ಥನಿಗೆ ಮದುವೆ ಮಾಡಿಕೊಟ್ಟಿದ್ದರು. ನನ್ನ ತಂಗಿ ಭಾಗ್ಯಮ್ಮ ರವರ ಗಂಡನ ಹೆಸರು ಕೃಷ್ಣಮೂರ್ತಿ. ನನ್ನ ತಂಗಿ ಭಾಗ್ಯಮ್ಮ ರವರ ಗಂಡ ತೀರಿಕೊಂಡಿರುತ್ತಾರೆ. ನನ್ನ ತಂಗಿ ಭಾಗ್ಯಮ್ಮ ರವರು ಕಳೆದ 14 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ನನ್ನ ತಂಗಿ ಭಾಗ್ಯಮ್ಮ ರವರ ಮಗ ಮನೋಹರ ತೀರಿಕೊಂಡು 7 ವರ್ಷಗಳು ಆಗಿದೆ. ನನ್ನ ತಂಗಿ ಭಾಗ್ಯಮ್ಮ ರವರ ಮಗಳು ಸೌಂದರ್ಯ ರವರಿಗೆ ಈಗ 22 ವರ್ಷ ವಯಸ್ಸು. ಸದರಿ ಸೌಂದರ್ಯ ರವರಿಗೆ ಮದುವೆಯಾಗಿರುತ್ತದೆ. ಸದರಿ ಸೌಂದರ್ಯ ರವರು ಮದುವೆಯಾಗಿ ತನ್ನ ಗಂಡನ ಮನೆಯಾದ ಕಲ್ಯಾಣದುರ್ಗ ತಾಲ್ಲೂಕಿನ ಜಾಜರ್ ಕಲ್ಲು ಗ್ರಾಮದಲ್ಲಿ ವಾಸವಿದ್ದಾರೆ.

**ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿಯರಿಗೆ ಪರ ವಕೀಲರು ಸಮಯ ಕೋರಿದ್ದು ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು}**

ಓ ಹೇ ಕೇ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ಮತ್ತು ಸಿ ಜೆ ಎಂ ನ್ಯಾಯಾಧೀಶರು

ಚಿತ್ರದುರ್ಗ